ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ :– ನಮ್ಮ ರೈತರ ಸಮಸ್ಯೆ ಇದೆ, ಅದರ ಬಗ್ಗೆ ಮಾತನಾಡಲು ಅವಕಾಶ ಕೊಡಿ. ಸರ್ಕಾರದವರು ಮೊದಲು ತೊಗರಿ ಖರೀದಿ ಮಾಡುತ್ತಿದ್ದರು. ಮಧ್ಯದಲ್ಲಿ ...

(ಗೊಂದಲ)

ಅಧ್ಯಕ್ಷರು :– ಇದರ ಬಗ್ಗೆಯೇ Calling attention ವೊಂದು ಇದೆ. ಆಗ ಇದರ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :– ತೊಗರಿ ಬೇಳೆ ಬೆಲೆಯೆಲ್ಲಾ ಕುಸಿದು ಹೋಗಿದೆ. ದಯಮಾಡಿ ಅದರ ಬಗ್ಗೆ ...

(ಗೊಂದಲ)

ಅಧ್ಯಕ್ಷರು :– ಅದರ ಬಗ್ಗೆ Calling attention ವೊಂದು ಇದೆ. ಆಗ ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :– ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿ. ಮಾನ್ಯ ಸದಸ್ಯರು ಇದರಿಂದಲಾದರೂ ಸಮಾಧಾನಗೊಳ್ಳುತ್ತಾರೆ.

(ಗೊಂದಲ)

ಅಧ್ಯಕ್ಷರು :– ಇದರ ಬಗ್ಗೆಯೇ Calling attention ಇದೆ. ಆಗ ತಾವು ಮಾತನಾಡಿ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಗುತ್ತೇದಾರ್ ಸುಭಾಷ್ ರುಕ್ಮಯ್ಯರವರು ಸದನದ ಬಾವಿಯಲ್ಲಿ ಧರಣಿ ನಿರತರಾದರು)

(ಗೊಂದಲ)

ಅಧ್ಯಕ್ಷರು :– ಇದರ ಬಗ್ಗೆಯೇ Calling attentionವೊಂದು ಇದೆ. ಆಗ ನೀವು ಮಾತನಾಡುವಿರಂತೆ ಎಂದು ನಾನು ಹೇಳಿದರೂ ನೀವು ಕೇಳದೆ, ನೆಟ್ಟಗೆ ಸದನದ ಬಾವಿಗೆ ಬರುತ್ತಿದ್ದೀರಲ್ಲಾ? ಇದು ಸರಿಯಲ್ಲ. ಗಮನ ಸೆಳೆಯುವ ಸೂಚನೆ ಚರ್ಚೆಗೆ ಬಂದಾಗ ನಿಮ್ಮನ್ನೂ ಕರೆಯುತ್ತೇನೆ. ಆಗ ನೀವೂ ಮಾತನಾಡಿ.

(ಗೊಂದಲ)

ಅಧ್ಯಕ್ಷರು :– ಚರ್ಚೆಗೆ ಅವಕಾಶ ಕೊಡುವುದಿಲ್ಲ ಎಂದು ನಾನು ಹೇಳಿಲ್ಲ. ಖಂಡಿತವಾಗಿಯೂ ಚರ್ಚೆಗೆ ಅವಕಾಶ ಕೊಡುತ್ತೇನೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಗುತ್ತೇದಾರ್ ಸುಭಾಷ್ ರುಕ್ಮಯ್ಯರವರು ಸದನದ ಬಾವಿಯಿಂದ ತಮ್ಮ ಧರಣಿಯನ್ನು ಹಿಂತೆಗೆದುಕೊಂಡು ತಮ್ಮ ಸ್ಥಾನಕ್ಕೆ ಮರಳಿದರು)

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ :– ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯೊಂದನ್ನು ಮಾಡುತ್ತೇನೆ. ನಗರಾಭಿವೃದ್ಧಿಗೆ ಸ್ಥಳೀಯ ಸಂಸ್ಥೆಗಳಿಗೆ 10 ಕೋಟಿ ರೂ.ಗಳನ್ನು release ಮಾಡಿದ್ದು ಸತ್ಯ. ನಾನು ಖುದ್ದಾಗಿ 32 ಲಕ್ಷ ರೂ.ಗಳ proposal ವೊಂದನ್ನು ಮಾನ್ಯ ಮಂತ್ರಿಗಳಿಗೆ ಕೊಟ್ಟು, ನಾನು ನಿಮ್ಮ Secretarty ಯವರ ಹತ್ತಿರ ಹೋದಾಗ, ನಿಮ್ಮ Secretaryಯವರು DMA ಗೆ ಹಣವನ್ನು release ಮಾಡಿದ್ದಾರೆ. DMA ಯವರನ್ನೂ ಸಹ ನಾನು ಭೇಟಿಯಾದೆ. ಅವರ ಕೆಳಗಡೆ ಇರತಕ್ಕಂಥ ಅಧಿಕಾರಿಗಳಾದ CAO ಗಳು, ಅವುಗಳಿಗೆಲ್ಲಾ estimate ಬರಬೇಕು, ಅವುಗಳು approval ಆಗಬೇಕೆಂದು ಹೇಳಿ, ಇದುವರೆಗೂ ಒಂದು ಪೈಸೆಯನ್ನೂ ಯಾವ ಸ್ಥಳೀಯ ಸಂಸ್ಥೆಗಳಿಗೂ ಕಳುಹಿಸಿಲ್ಲ. ಅದನ್ನೆಲ್ಲಾ ತಮ್ಮ ಹತ್ತಿರವೇ ಇಟ್ಟುಕೊಂಡು ಕುಳಿತಿದ್ದಾರೆ. ನಮ್ಮಲ್ಲಿ ಏನಾಗಿದೆ ಎಂದರೆ, 30ಕ್ಕೆ ಕಾಲುವೆ ಬಂದ್ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ, ಇದನ್ನು ಅವರಿಗೆ ಹೋಗಿ ನಾವು ಹೇಳಿದರೂ, ಅವರಿಗೆ ಅರ್ಥವಾಗುತ್ತಿಲ್ಲ. ಅವರು regular schemes ಗಳಿಗೆ ಮಾಡಿದಂತೆ ಮಾಡುತ್ತಿದ್ದಾರೆ. ತಾವು ಬಿಡುಗಡೆ ಮಾಡಿದ 10 ಕೋಟಿ ರೂ. ಗಳಲ್ಲಿ ಒಂದು ಪೈಸೆಯನ್ನೂ ಸಹಾ ನಮಗೆ ಕಳುಹಿಸಿಲ್ಲ. ಎಲ್ಲೂ ಕೂಡ ಒಂದು ಪೈಸೆ ಹೋಗಿಲ್ಲ.

ಅಧ್ಯಕ್ಷರು :– ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ, ದಯವಿಟ್ಟು ಕೇಳಿ.

ಶ್ರೀ ಡಿ.ವಿ. ಸದಾನಂದಗೌಡ :– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನಾನು ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಹಣವನ್ನು ರಿಲೀಸ್ ಮಾಡಬೇಕೆಂದು ಹೇಳುತ್ತೆನೆ. ಅಲ್ಲಿ ಅವರ ಆ ಭಾಗದಲ್ಲಿ ಇರುವಂತಹ ಅಧಿಕಾರಿಗಳು ಇದಕ್ಕೆ ಬೇಕಾದಂತಹ estimates ಬಾಕಿ ವಗೈರೆ ಏನೇನಿದೆ ಅದನ್ನೆಲ್ಲಾ ಮಾಡಿಕೊಂಡು ಮುಂದುವರೆಸಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಅಧ್ಯಕ್ಷರು :– ಆಯಿತು.